ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-2 Issue 4, JAN-FEB 2021, 30-33
©*IIMRD*, Mysuru

IIMRD JOURNALS

www.iimrd.com

# ಕಲ್ಯಾಣಿ ಚಾಲುಕ್ಯರ ಕಾಲದ ಭೂದಾನ: ಒಂದು ಐತಿಹಾಸಿಕ ವಿಶ್ಲೇಷಣೆ

**ಅರುಣ್ ಕುಮಾರ್ ಬಿ.[1] ಮತ್ತು ಪ್ರೊ. ನಿರ್ಮಲ್ ರಾಜು[2]**

**ಪೀಠಿಕೆ**

ಕಲ್ಯಾಣಿ ಚಾಲುಕ್ಯರ ಕಾಲದ ಭೂದಾನದ ಪರಿಕಲ್ಪನೆ ವ್ಯಾಪಕಾರ್ಥ ಉಳ್ಳದಾಗಿದ್ದು, ಅದು ಮೇಲ್ನೋಟಕ್ಕೆ ಸರಳವಾಗಿ ಕಂಡುಬಂದರೂ, ಅತ್ಯಂತ ಸಂಕೀರ್ಣವಾದ ಹಾಗೂ ಸಮಾಜದಲ್ಲಿ ಯಜಮಾನಿಕೆ ವಹಿಸುವ ಶಕ್ತಿಗಳ ಅಸ್ತ್ರವಾಗಿ ಬಳಕೆಯಾದಂತದ್ದು. ಈ ಕಾರಣದಿಂದಾಗಿ ಇವರ ಕಾಲದ ಭೂದಾನದ ಚರಿತ್ರೆಯನ್ನು ಅಧ್ಯಯನ ನಡೆಸುವಾಗ ಭೂದಾನದ ಪರಿಕಲ್ಪನೆಯನ್ನು ವಿಮರ್ಶಾತ್ಮಕವಾಗಿ ನೋಡುವುದು ಅನಿವಾರ್ಯವೆನಿಸುತ್ತದೆ. ಕಲ್ಯಾಣ ಚಾಲುಕ್ಯರ ಆಡಳಿತ ಅವಧಿಯಲ್ಲಿ ಅರಸರು, ರಾಣಿಯರು ಸಾಮಂತರು, ವರ್ತಕರು ದೇವಾಲಯ, ಬಸದಿ, ಮಠ ವಿಹಾರಗಳನ್ನು ನಿರ್ಮಿಸಿ ಅವುಗಳಿಗೆ ಭೂದಾನ ನೀಡಿ ಪ್ರಚಾರದಲ್ಲಿರುವಂತೆ ನೋಡಿಕೊಳ್ಳುವ ಕೆಲಸವನ್ನು ನಿರ್ವಹಿಸಿದರು. ಧರ್ಮದ ಭದ್ರ ತಳಹದಿಗೆ ಭೂದಾನ ಸಹಾಯಕವಾಗಿರುತ್ತಿತ್ತು. ಅರಸರು, ವರ್ತಕರು, ಅಧಿಕಾರಿ ವರ್ಗದವರು ಧಾರ್ಮಿಕ ಕ್ಷೇತ್ರದಲ್ಲಿ ಭೂದಾನದ ಮಹತ್ವವನ್ನು ಅರಿತುಕೊಂಡು ಹೆಚ್ಚು ಹೆಚ್ಚು ಭೂದಾನವನ್ನು ದೇವಾಲಯ ಮತ್ತು ಬ್ರಾಹ್ಮಣರಿಗೆ ನೀಡಲು ಮುಂದಾದರು. ರಾಜ ಪ್ರಭುತ್ವದ ಅಸ್ತಿತ್ವಕ್ಕೋಸ್ಕರ ಧಾರ್ಮಿಕ ಪ್ರಭುತ್ವವನ್ನು ಬಳಸಿಕೊಳ್ಳುವುದು ಅನಿವಾರ್ಯವಾಗಿತ್ತು. ಪರೋಕ್ಷವಾಗಿ ಈ ವ್ಯವಸ್ಥೆ ಧಾರ್ಮಿಕ ಪ್ರಭುತ್ವವನ್ನು ಗಟ್ಟಿಗೊಳಿಸುವ ಅಪಾಯವಿದ್ದರೂ, ರಾಜಪ್ರಭುತ್ವಕ್ಕೆ ತಾತ್ಕಾಲಿಕ ಭದ್ರತೆಯನ್ನು ನೀಡುತ್ತಿತ್ತು. ಜೊತೆಗೆ ವಿವಿಧ ಧಾರ್ಮಿಕ ಪಂಗಡದವರನ್ನು ಮತ್ತು ಅಧಿಕಾರಿ ವರ್ಗವನ್ನು ಅಧೀನದಲ್ಲಿಟ್ಟುಕೊಳ್ಳಲು ಇವರಿಗೆ ಭೂದಾನ ನೀಡುವುದು ಅನಿವಾರ್ಯವಾಗಿತ್ತು.

ಕಲ್ಯಾಣಿ ಚಾಲುಕ್ಯರ ಆಳ್ವಿಕೆಯ ಉದ್ದಗಲಕ್ಕೂ ಬ್ರಾಹ್ಮಣರಿಗೆ ಮತ್ತು ದೇವಾಲಯಗಳಿಗೆ ಭೂದಾನ ನೀಡಲಾಗಿತ್ತು. ಭೂದಾನ ನೀಡುವ ಸಂದರ್ಭದಲ್ಲಿ ಭೂದಾನಕ್ಕೆ ಧಾರ್ಮಿಕ ಮಹತ್ವ ನೀಡಲಾಗಿತ್ತು. ಅದೊಂದು ಆರ್ಥಿಕ ಚಟುವಟಿಕೆಯಾಗಿದ್ದರೂ ಧಾರ್ಮಿಕ ಆಚರಣೆಯಾಗಿ ಪರಿವರ್ತನೆಗೊಂಡಿತ್ತು. ಬ್ರಾಹ್ಮಣರಿಗೆ ಭೂದಾನವಾಗಿ ನೀಡುವ ಭೂಮಿಯನ್ನು ಬ್ರಹ್ಮದೇಯ ಎಂಬ ಹೆಸರಿನಿಂದ ಕರೆಯಲಾಗುತ್ತಿತ್ತು. ಧಾರ್ಮಿಕ ಚಟುವಟಿಕೆಗಳ ಮೂಲಕ ಬ್ರಾಹ್ಮಣ ವರ್ಗ ಅತ್ಯಂತ ಪ್ರಭಾವಿ ವರ್ಗವಾಗಿ ರೂಪುಗೊಂಡಿತ್ತು. ದೇವಾಲಯ ಮಠಗಳ ನಿರ್ವಹಣೆ ಬಿರುಸಿನಿಂದ ನಡೆದವು. ದಾನವಾಗಿ ಸಿಕ್ಕಿದ ಭೂಮಿಯ ಆಡಳಿತವೂ

[1] *ಸಂಶೋಧನಾ ವಿದ್ಯಾರ್ಥಿ, ಇತಿಹಾಸ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ–ಕೊಣಾಜೆ.*

[2] *ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ–ಕೊಣಾಜೆ.*

ಬ್ರಾಹ್ಮಣರಿಗೆ ಸೇರಿತ್ತು. ದೇವಾಲಯಗಳು ಆಡಳಿತ ಕೇಂದ್ರಗಳಂತೆ ಕಾರ್ಯನಿರ್ವಹಿಸುತ್ತಿದ್ದವು. ಇವರ ಆಡಳಿತ ಅವಧಿಯಲ್ಲಿ ಭೂಮಿಯನ್ನು ನೀಡುವ ಸಂದರ್ಭದಲ್ಲಿ ವೈದಿಕ ಹಿನ್ನೆಲೆಯಿಂದ ಬಂದ ವರ್ಣಾಶ್ರಮ ನಿಯಮಗಳನ್ನು ಪಾಲಿಸಲಾಗುತ್ತಿತ್ತು. ಇದರಿಂದಾಗಿ ಸಮಾಜದ ಕೆಳವರ್ಗದ ಜನರಿಗೆ ಭೂಮಿಯನ್ನು ನೀಡಿರುವ ಉಲ್ಲೇಖ ಸಿಗುವುದಿಲ್ಲ. ಭೂದಾನ ಪ್ರಕ್ರಿಯೆ ಪ್ರತಿಷ್ಠಿತ ಧಾರ್ಮಿಕ ಗುಂಪುಗಳಿಗೆ ರಾಜಕೀಯ ಮತ್ತು ಧಾರ್ಮಿಕ ಅಧಿಕಾರವನ್ನು ಹೊಂದಿದ ಸಮಾಜದ ಮೇಲ್ವರ್ಗದ ಜನರಿಗೆ ಸಂಪತ್ತು ಮತ್ತು ಸೌಲಭ್ಯವನ್ನು ಪಡೆದುಕೊಳ್ಳಲು ನೆರವಾಯಿತು.

ಭೂದಾನ ಪ್ರಕ್ರಿಯೆಯು ಹೊಸ ಸಿರಿವಂತ ಭೂಮಾಲೀಕ ವರ್ಗವೊಂದು ರೂಪುಗೊಳ್ಳಲು ಅವಕಾಶ ಮಾಡಿಕೊಟ್ಟಿತ್ತು. ಬ್ರಾಹ್ಮಣರಿಗೆ ಭೂಮಿಯನ್ನು ನೀಡಿರುವುದು ಹೊಸ ಭೂಮಾಲೀಕರ ಹುಟ್ಟಿಗೆ ಕಾರಣವಾದವು. ಭೂದಾನದ ರೂಪದಲ್ಲಿ ಭೂಮಿಯನ್ನು ಪಡೆದು ಭೂಮಾಲೀಕರಾಗಿ ಪರಿವರ್ತನೆಗೊಂಡವರನ್ನು ಮಹಾಜನರೆಂದು ಕರೆಯಲಾಗಿದೆ. ಬ್ರಾಹ್ಮಣ ಭೂಮಾಲೀಕರು ಮಹಾಜನರಾಗಿ ಕಾರ್ಯ ನಿರ್ವಹಿಸುತ್ತಿದ್ದರು. ಭೂದಾನವಾಗಿ ಸಿಕ್ಕಿದ ಭೂಮಿಯ ಒಡೆತನ ಮತ್ತು ವಿವರಗಳನ್ನು ಮಹಾಜನರು ನೋಡಿಕೊಳ್ಳುತ್ತಿದ್ದರು. ಇದರ ಜೊತೆಗೆ ತೆರಿಗೆ ಸಂಗ್ರಹಿಸುವುದು, ಭೂಮಿಯನ್ನು ದತ್ತಿ ನೀಡುವುದು, ಕೆರೆಗಳನ್ನು ನಿರ್ಮಿಸುವುದು, ಧಾರ್ಮಿಕ ಮತ್ತು ಶೈಕ್ಷಣಿಕ ಕೆಲಸ ಕಾರ್ಯಗಳನ್ನು ಮಾಡುತ್ತಿದ್ದರು. ಇದರಿಂದಾಗಿ ಬ್ರಹ್ಮದೇಯ ಹಳ್ಳಿಗಳು ಬ್ರಾಹ್ಮಣ ಭೂಮಾಲೀಕರ ಅಧೀನಕ್ಕೆ ಬರುವಂತಾಯಿತು. ನಂತರ ಮಹಾಜನರು ಹಳ್ಳಿಗಳ ಪ್ರತಿನಿಧಿಗಳಾಗಿ ಆಯ್ಕೆಗೊಂಡು ಕೇಂದ್ರ ಪ್ರಭುತ್ವ ಮತ್ತು ರೈತರ ನಡುವಿನ ಮಧ್ಯವರ್ತಿಗಳಾಗಿ ಅಧಿಕಾರ ಚಲಾಯಿಸುತ್ತಿದ್ದರು. ಇದರಿಂದಾಗಿ ಕೃಷಿಕರು ತಮ್ಮ ಪ್ರಾತಿನಿಧ್ಯವನ್ನು ಕಳೆದುಕೊಳ್ಳಬೇಕಾಯಿತು. ಭೂಮಾಲೀಕರು ಒಂದು ಸಂಕೀರ್ಣ ಸಮಾಜ ಮತ್ತು ರಾಜಕಾರಣವನ್ನು ಹುಟ್ಟು ಹಾಕಿದರು. ನಂತರ ಮಹಾಜನರು ಹಳ್ಳಿಗಳ ಪ್ರತಿನಿಧಿಗಳಾಗಿ ಆಯ್ಕೆಗೊಂಡು ಕೇಂದ್ರ ಪ್ರಭುತ್ವ ಮತ್ತು ರೈತರ ನಡುವಿನ ಮಧ್ಯವರ್ತಿಗಳಾಗಿ ಅಧಿಕಾರ ಚಲಾಯಿಸುತ್ತಿದ್ದರು. ಇದರಿಂದಾಗಿ ಕೃಷಿಕರು ತಮ್ಮ ಪ್ರಾತಿನಿಧ್ಯವನ್ನು ಕಳೆದುಕೊಳ್ಳಬೇಕಾಯಿತು.

ಭೂ ಮಾಲೀಕ ಮಧ್ಯವರ್ತಿಗಳು ಒಂದು ಸಂಕೀರ್ಣ ಸಮಾಜ ಮತ್ತು ರಾಜಕಾರಣವನ್ನು ಹುಟ್ಟು ಹಾಕಿದರು. ಅದೇ ರೀತಿ ಭೂಮಿಯನ್ನು ರೈತರು ಸಾಗುವಳಿ ಮಾಡಿ ಕಂದಾಯವನ್ನು ಅರಸನ ಬದಲು ಬ್ರಾಹ್ಮಣರಿಗೆ ಕೊಡುತ್ತಿದ್ದರು. ಬ್ರಾಹ್ಮಣರಿಗೆ ವೈಯಕ್ತಿಕವಾಗಿ ನೀಡಿದ ಬ್ರಹ್ಮದೇಯಗಳ ವಿಷಯಕ್ಕೆ ಬಂದರೆ ಕೆಲವು ಹಳ್ಳಿಗಳಲ್ಲಿ ಅವರಿಗೆ ಭೂಮಿಯನ್ನು ದಾನ ಮಾಡಿದದು ತಿಳಿದುಬರುತ್ತದೆ. ಅಂತಹ ಸಂದರ್ಭದಲ್ಲಿ ಗ್ರಾಮ ಮುಖ್ಯಸ್ಥನು ಆ ಬ್ರಾಹ್ಮಣ ಗ್ರಾಮಗಳಿಂದ ಕಂದಾಯವನ್ನು ಸಂಗ್ರಹಿಸುತ್ತಿರಲಿಲ್ಲ. ಇಡೀ ಹಳ್ಳಿಯಲ್ಲಿ ಬ್ರಾಹ್ಮಣ ಗ್ರಾಮಗಳಿಂದ ಕಂದಾಯವನ್ನು ಸಂಗ್ರಹಿಸುತ್ತಿರಲಿಲ್ಲ. ಇಡೀ ಹಳ್ಳಿಯನ್ನು ಬ್ರಾಹ್ಮಣನಿಗೆ ನೀಡಿದಾಗ ಆಗ್ರಹಾರಗಳಲ್ಲಿ ಅನುಸರಿಸಿದ ವ್ಯವಸ್ಥೆಯನ್ನು ಅಲ್ಲೂ ಅನುಸರಿಸಲಾಗುತ್ತಿತ್ತು.

ಬ್ರಾಹ್ಮಣ ಪ್ರತಿ ತೆರಿಗೆಗಳಿಂದ ವರಮಾನವನ್ನು ಪಡೆಯುತ್ತಿದ್ದರು. ಗ್ರಾಮದ ಮುಖ್ಯಸ್ಥನು ಅದನ್ನು ಕೊಡುತ್ತಿದ್ದನು. ಬ್ರಾಹ್ಮಣ ಪ್ರತಿ ಗ್ರಾಮವೇ ಹಳ್ಳಿಯ ಒಡೆಯನಾದುದರಿಂದ ಮುಖ್ಯಸ್ಥನು ಅನೇಕ ಸಂದರ್ಭಗಳಲ್ಲಿ ಆತನ ಸಲಹೆಯನ್ನು ಪಡೆದು ದಾನವನ್ನು ಸ್ವೀಕರಿಸಿದವರು. ಆಡಳಿತಕ್ಕೆ ಸಲ್ಲಿಸಬೇಕಾದ

ಕರ್ತವ್ಯಗಳ ಬಗೆಗೆ ಪರಿಚಯಿಸುದುದಾದರೆ ಮೇಲುನೋಟಕ್ಕೆ ಈ ಬ್ರಾಹ್ಮಣ ಗ್ರಹಿಕೆಗಳು ಯಾವ ಕರ್ತವ್ಯ ಬದ್ಧವಾಗಿರಲಿಲ್ಲ. ದಿನ ಪ್ರತಿಯಾಗಿ ಆಡಳಿತಕ್ಕೆ ಅವರು ಯಾವ ಸೇವೆಯನ್ನು ಮಾಡಬೇಕಾಗಿರಲಿಲ್ಲ. ಏಕೆಂದರೆ ದಾನವನ್ನು ನೀಡಿದುದು ಅವರ ವಿದ್ವತ್ತು ಸ್ವಚ್ಚರಿತ್ಯ ಸಮಾಜಿಕ ಬೌದ್ಧಿಕ ಮತ್ತು ಧಾರ್ಮಿಕ ಕ್ಷೇತ್ರಗಳಲ್ಲಿ ಅವರು ಮಾಡಿದ ಸಾಧನೆ ಇವುಗಳನ್ನು ನೀಡಲಾಯಿತು. ಇವರ ಕಾಲದಲ್ಲಿ ಭೂಮಿಯನ್ನು ದಾನ ಮಾಡಿತ್ತಿದ್ದರ ಫಲವಾಗಿ ಕಲ್ಯಾಣಿ ಚಾಲುಕ್ಯರ ಕಾಲದ ಆಡಳಿತದ ಪ್ರಧಾನ ಲಕ್ಷಣವಾಗಿದ್ದ ಕೇಂದ್ರೀಕೃತ ನಿಯಂತ್ರಣ ವ್ಯವಸ್ಥೆ ಕ್ರಮೇಣ ಕುಂಠಿತವಾಯಿತು. ಇದರಿಂದ ತೆರಿಗೆ ವಸೂಲಿ, ಬಿಟ್ಟಿ ಚಾಕರಿ ವಿಧಿಸುವುದು, ಕೃಷಿ ಮೊದಲಾದ ಕಾರ್ಯಗಾರಗಳು, ಕಾನೂನು ಸುವ್ಯವಸ್ಥೆಗಳ ಪಾಲನೆ ಮತ್ತು ರಾಜ್ಯದ ರಕ್ಷಣೆಗಳೂ ಸೇರಿದಂತೆ ಸರಕಾರದ ಅಧಿಕಾರಿಗಳು ನಿರ್ವಹಿಸುತ್ತಿದ್ದ ಕೆಲಸಕಾರ್ಯಗಳು ಹಂತ ಹಂತವಾಗಿ ಪುರೋಹಿತ ವರ್ಗಕ್ಕೂ ಸೇರಿದವು.

ಆರ್.ಎಸ್.ಶರ್ಮರವರು ಬ್ರಹ್ಮದೇಯ ದಾನದ ಬೆಳವಣಿಗೆಯನ್ನು ಕುರಿತು ಮಾರ್ಕ್ಸ್ ವಿಚಾರಗಳಿಂದ ಪ್ರಭಾವಿತರಾಗಿದ್ದಾರೆ. ಇವರ ಪ್ರಕಾರ ಬ್ರಹ್ಮದೇಯಗಳು ಆಡಳಿತಕ್ಕೂ ರೈತರಿಗೂ ನಡುವೆ ಮಧ್ಯವರ್ತಿಗಳಾ ಹುಟ್ಟಿಕೊಂಡು ಪ್ರಭಾವಶಾಲಿಗಳಾಗಿ ಗಣನೀಯ ಪ್ರಮಾಣದ ಆರ್ಥಿಕ ಮತ್ತು ರಾಜಕೀಯ ಅಧಿಕಾರವನ್ನು ಚಲಾಯಿಸಲು ಹಾಗೂ ಅದನ್ನು ಕಾನೂನು ಬದ್ದಗೊಳಿಸಲು ಅವಕಾಶ ಕಲ್ಪಿಸಿದವು. ಭೂಮಿಯ ಒಡೆತನವಿದ್ದ ಬ್ರಾಹ್ಮಣರ ಸಂಖ್ಯೆ ಹೆಚ್ಚುತ್ತಾ ಹೋದ ಹಾಗೆ ಅವರಲ್ಲಿ ಪೌರೋಹಿತ್ಯಾದಿ ಕರ್ತವ್ಯಗಳನ್ನು ಅಲ್ಲದೇ ಜಮೀನು ನಿರ್ವಹಣೆಗೆ ಹೆಚ್ಚಿನ ಗಮನ ಕೊಡತೊಡಗಿದ್ದರು. ಅವರಿಗೆ ಧಾರ್ಮಿಕ ಕರ್ತವ್ಯಗಳಿಗಿಂತಲೂ ಲೌಕಿಕ ಕೆಲಸ ಕಾರ್ಯಗಳು ಮುಖ್ಯವಾದವು. ಬ್ರಹ್ಮದೇಯ ಗ್ರಾಮಗಳು ಬ್ರಾಹ್ಮಣ ಸಂಪ್ರದಾಯ ಮೌಲ್ಯಗಳನ್ನು ಸಂರಕ್ಷಿಸುವಲ್ಲಿ ಯಶಸ್ವಿಯಾದವು. ಬ್ರಹ್ಮದೇಯ ಶಾಸನವನ್ನು ನೋಡಿದರೆ ಬ್ರಹ್ಮದೇಯ ಗ್ರಾಮದಲ್ಲಿ ಬ್ರಾಹ್ಮಣರು ಸಾಮರಸ್ಯದಿಂದ ಬದುಕುತ್ತಿದ್ದರೆಂಬುದನ್ನು ನೋಡಬಹುದು. ಆದರೆ ಬ್ರಾಹ್ಮಣೇತರರು ನೆಲೆಸಿರುವ ಉಲ್ಲೇಖ ಕಂಡುಬರುವುದಿಲ್ಲ.

ಬ್ರಹ್ಮದೇಯಗಳು ವರ್ಣಾಶ್ರಮ ಧರ್ಮಗಳನ್ನು ಪ್ರಸಾರ ಮಾಡುತ್ತಿದ್ದವು. ಅದು ಸಾಮಾಜಿಕ ವ್ಯವಸ್ಥೆಯ ಆಧಾರವಾಗಿದ್ದು, ಆಡಳಿತ ವರ್ಗಕ್ಕೂ ಆಧಾರವಾಗಿತ್ತು. ಅದೇ ರೀತಿ ದೇವದಾಯ ದಾನಗಳಲ್ಲಿ ರಾಜಮನೆತನದವರು, ಅಧಿಕಾರಿಗಳು. ಶ್ರೀಮಂತ ವರ್ಗದವರು ಇದಕ್ಕೆ ಭಿನ್ನವಾಗಿ ಸಮಾಜದ ಪ್ರತಿಯೊಬ್ಬನಿಗೂ ಅದು ರಾಜನಿರಲಿ, ರೈತನಿರಲಿ ತಮ್ಮ ಕಪ್ಪಕಾಣಿಕೆಯನ್ನು ಸಲ್ಲಿಸಲು ದೇವದಾಯಗಳು ಅವಕಾಶವನ್ನು ನೀಡಿದ್ದವು. ಗ್ರಾಮಗಳು, ಜಮೀನುಗಳು, ನಗದು ಹಣ. ಆಭರಣ ದೇವದಾಯದ ನಿರ್ವಹಣೆಗೆ ಬೇಕಾದ ಲೋಹದ ವಸ್ತುಗಳು. ಹೀಗೆ ಯಾವ ರೂಪದಲ್ಲಿ ಬೇಕಾದರೂ ಸಲ್ಲಿಸಬದುದಾಗಿತ್ತು. ಹೀಗೆ ದೇವದಾಯ ದಾನಗಳೂ ಪರೋಕ್ಷವಾಗಿ ಸಮಾಜಿಕ ಪಿತೃತ್ವ ಭಾವನೆಗೆ ಕೊಡುಗೆ ನೀಡಿದುದರ ಜೊತೆಗೆ ಬ್ರಾಹ್ಮಣರಿಗೆ ನಿಷ್ಠಾವಂತಿಕೆಯ ಭಾವನೆ ಹುಟ್ಟಲು ಸಹಾಯಕವಾದವು.

**ಪರಾಮರ್ಶನ ಗ್ರಂಥಗಳು**


- ದೇವಕೊಂಡರೆಡ್ಡಿ. (ಸಂ) (1998). ಕನ್ನಡ ವಿ.ವಿ. ಶಾಸನ ಸಂಪುಟ: 1, ಬಳ್ಳಾರಿ ಜಿಲ್ಲೆ. ಪ್ರಸಾರಾಂಗ ಕನ್ನಡ ವಿ.ವಿ. ಹಂಪಿ.

- ದೇವರಕೊಂಡರೆಡ್ಡಿ (ಸಂ) (1999). ಕನ್ನಡ ವಿ.ವಿ. ಶಾಸನ ಸಂಪುಟ: 2, ಕೊಪ್ಪಳ ಜಿಲ್ಲೆ. ಪ್ರಸಾರಾಂಗ ಕನ್ನಡ ವಿ.ವಿ. ಹಂಪಿ.
- ದೇವರಕೊಂಡರೆಡ್ಡಿ (ಸಂ) (2006). ಕನ್ನಡ ವಿ.ವಿ. ಶಾಸನ ಸಂಪುಟ: 5, ಬಾಗಲಕೋಟೆ ಜಿಲ್ಲೆ. ಪ್ರಸಾರಾಂಗ ಕನ್ನಡ ವಿ.ವಿ. ಹಂಪಿ.
- ದೇವರಕೊಂಡರೆಡ್ಡಿ (ಸಂ) (2003). ಕನ್ನಡ ವಿ.ವಿ. ಶಾಸನ ಸಂಪುಟ: 7, ರಾಯಚೂರು ಜಿಲ್ಲೆ. ಪ್ರಸಾರಾಂಗ ಕನ್ನಡ ವಿ.ವಿ. ಹಂಪಿ.
- ದೇವರಕೊಂಡರೆಡ್ಡಿ (ಸಂ) (2006). ಕನ್ನಡ ವಿ.ವಿ. ಶಾಸನ ಸಂಪುಟ: 8, ಬೀದರ್ ಜಿಲ್ಲೆ. ಪ್ರಸಾರಾಂಗ ಕನ್ನಡ ವಿ.ವಿ. ಹಂಪಿ.


- ದೇವರಕೊಂಡರೆಡ್ಡಿ (ಸಂ) (2003). ಕನ್ನಡ ವಿ.ವಿ. ಶಾಸನ ಸಂಪುಟ: 7, ರಾಯಚೂರು ಜಿಲ್ಲೆ. ಪ್ರಸಾರಾಂಗ ಕನ್ನಡ ವಿ.ವಿ. ಹಂಪಿ.
- ದೇವರಕೊಂಡರೆಡ್ಡಿ (ಸಂ) (2006). ಕನ್ನಡ ವಿ.ವಿ. ಶಾಸನ ಸಂಪುಟ: 8, ಬೀದರ್ ಜಿಲ್ಲೆ. ಪ್ರಸಾರಾಂಗ ಕನ್ನಡ ವಿ.ವಿ. ಹಂಪಿ.


- ದೇವಕೊಂಡರೆಡ್ಡಿ (ಸಂ) (1998). ಕನ್ನಡ ವಿ.ವಿ. ಶಾಸನ ಸಂಪುಟ: 1, ಬಳ್ಳಾರಿ ಜಿಲ್ಲೆ. ಪ್ರಸಾರಾಂಗ ಕನ್ನಡ ವಿ.ವಿ. ಹಂಪಿ.
- ಮೋಹನ್ ಕೃಷ್ಣ ರೈ ಕೆ. (2009). ಪ್ರಭುತ್ವ ಮತ್ತು ಜನತೆ. ಪ್ರಸಾರಾಂಗ ಕನ್ನಡ ವಿ.ವಿ. ಹಂಪಿ.
- ಮೋಹನ್ ಕೃಷ್ಣ ರೈ, (2004). ಚರಿತ್ರೆ ಕಥನ. ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.
- ನಾಗಯ್ಯ ಜೆ.ಎಂ. (2011). (ಸಂ), ಕಲ್ಯಾಣಿ ಚಾಲುಕ್ಯರ ಶಾಸನಗಳು. ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿ.ವಿ. ಮೈಸೂರು.
- ನಾಗರಾಜು ಡಿ.ಎಂ. (2012). ಕಲ್ಯಾಣಿ ಚಾಲುಕ್ಯ ಆರನೆಯ ವಿಕ್ರಮಾದಿತ್ಯನ ಶಾಸನಗಳ ಸಾಂಸ್ಕೃತಿಕ ಅಧ್ಯಯನ. ಗೌತಮ ಪ್ರಕಾಶನ, ಮೈಸೂರು.
- ಪ್ರಸನ್ನ ಕುಮಾರ್ ಎಂ. (2011). ಮೈಸೂರಿನ ಇತಿಹಾಸದಲ್ಲಿ ದಾನ. ಸಮನ್ವಯ ಪ್ರಕಾಶನ, ಮಂಗಳೂರು.